ಶ್ರೀ ಎಂ. ವೀರಪ್ಪ ಮೊಯಿಲಿ (ಸಂಸದೀಯ ಹಾಗೂ ಶಿಕ್ಷಣ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೇ, ಮಾಹಿತಿಯನ್ನು ಸಂಗ್ರಹ ಮಾಡಿ ಉತ್ತರಗಳನ್ನು ಪ್ರತ್ಯೇಕವಾಗಿ ಒದಗಿಸುತ್ತೇನೆ.

ಚೆನ್ನಪಟ್ಟಣ ತಾಲ್ಲೂಕಿನ ಟಿ. ಎ. ಪಿ. ಎಂ. ಎಸ್.ನಲ್ಲಿ ಅವ್ಯವಹಾರ.

Sri. Sadat Ali Khan (Channapattana):- The Hon'ble Minister for Co-operation will be pleased to note that the T.A.P.M.C.S. Limited, Channapattana is running under heavy loss due to the misuse of funds by the management which involved with the Officials. The following informations may be furnished in the interest of Public Service.

What is the actual financial position of the above Society, the total amount of loan taken by the society in B.D.C.C. Bank in the name of Cash Credit Account; the loan amount spent by the society; Whether it is a fact that the society is due to the following heads at present: (1) Rs. 20,78,000/- to B.D.C.C. Bank, (2) C.C.L. A/c Cloth and Text Books: Rs. 3,50,000/-. 3) Call deposit amount collected by the Public is also due by the society. Whether it is a fact that more funds has been misused by the society; while purchasing 2 boiler tanks; while purchasing any major items to the Society the usual formalities regarding calling tenders etc., are maintained or not; What action has been taken by the Government in this regard?

ಶ್ರೀ ಡಿ. ಕೆ. ಶಿವಕುಮಾರ್ (ಬಂದೀಖಾನೆ ಮತ್ತು ಗೃಹರಕ್ಷಕ ದಳಗಳ ಸಚಿವರು, ರಾಜ್ಯ ಸಚಿವರ ಪರವಾಗಿ):- ಚೆನ್ನಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವು ೩೧-೩-೧೯೯೧ರವರೆಗೆ ರೂ. ೫.೩೮ ಲಕ್ಷಗಳ ನಿವ್ವಳ ನಷ್ಟ ಅನುಭವಿಸಿರುತ್ತದೆ. ತಾತ್ಕಾಲಿಕ ಲೆಕ್ಕ ಪರದಿಗಳ ಪ್ರಕಾರ ೧-೪-೧೯೯೧ ರಿಂದ ೩೧-೧೧-೯೨ರವರೆಗೆ ಸಂಘವು ಸುಮಾರು ೧.೪೪ ಲಕ್ಷಗಳಷ್ಟು ನಷ್ಟವನ್ನು ಅನುಭವಿಸಿರುತ್ತಾರೆ. ಇದರಿಂದಾಗಿ ಸಂಘದ ಒಟ್ಟು ನಿವ್ವಳ ನಷ್ಟ ದಿನಾಂಕ ೩೧-೧೧-೧೯೯೨ರವರೆಗೆ ರೂ. ೬.೮೨ ಲಕ್ಷಗಳಷ್ಟಾಗಿರುತ್ತದೆ. ಸಂಘದ ನೌಕರರು ಒಟ್ಟು ಎಂಟು ಪ್ರಕರಣಗಳಲ್ಲಿ ರೂ. ೪,೦೧,೯೭೦-೮೧ಗಳಷ್ಟು ಹಣವನ್ನು ದುರುಪಯೋಗಗೊಳಿಸಿದ್ದು ವಸೂಲಾತಿಗಾಗಿ ಎಲ್ಲಾ ಎಂಟು ಪ್ರಕರಣಗಳಲ್ಲಿ ಸಿವಿಲ್ ಕ್ರಮ ತೆಗೆದುಕೊಂಡಿದ್ದು, ವಿವಿಧ ನ್ಯಾಯಾಲಯಗಳಲ್ಲಿ ವ್ಯಾಜ್ಯ ಹೂಡಿದ್ದು, ಅವು ವಿವಿಧ ಹಂತಗಳಲ್ಲಿರುತ್ತವೆ.

ಫೆಬ್ರವರಿ ೧೯೯೦ರಿಂದ ಜುಲೈ ೧೯೯೧ರವರೆಗೆ ಸಕ್ಕರೆ ವ್ಯತ್ಯಾಸ ದರ ಮತ್ತು ಸಾಗಾಣಿಕೆ ವೆಚ್ಚಗಳ ಬಗ್ಗೆ ಸರಕಾರದಿಂದ ರೂ. ೮.೮೬ ಲಕ್ಷ ಹಣ ಬರಬೇಕಾಗಿರುವುದರಿಂದಲೂ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪಾಸ್ಬೆಲ್‌ಗಳಿಗೆ ಆಹಾರ ಧಾನ್ಯಗಳನ್ನು ಪೂರೈಕೆ

ಮಾಡದಿದ್ದುದರಿಂದಲೂ ಈ ಹಣವು ಸಕಾಲಕ್ಕೆ ಬರದೇ ಇದ್ದುದರಿಂದ ಹೆಚ್ಚು ಬಡ್ಡಿ ಹಣವನ್ನು ನಗದು ಪತ್ತಿನ ಸಾಲದ ಮೇಲೆ ಬ್ಯಾಂಕಿಗೆ ಪಾವತಿ ಮಾಡಬೇಕಾಗಿರುವುದರಿಂದಲೂ ಸಪ ನಷ್ಟವೆ ಅನುಭವಿಸಲು ಕಾರಣವಾಗಿರುವ ದಿನಾಂಕ ೩೧-೮-೧೯೯೧ಕ್ಕೆ ಸಂಘದ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿರುತ್ತದೆ.

ರೂ. ಲಕ್ಷಗಳಲ್ಲಿ

ಸರ್ಕಾರದ ಶೇರು ಹಣ	೭.೪೭
ಜಿಲ್ಲಾ ಪರಿಷತ್ತಿನಿಂದ ಶೇರು ಹಣ	೦.೨೫
ವ್ಯಾಪಾರ ಮಳಿಗೆ ಸಾಲ	೦.೧೭
ಪೀಠೋಪಕರಣಗಳ ಸಾಲ	೦.೦೩
ಗೋದಾಮು ಸಾಲ	೧.೦೦
ಲಾರಿ ಸಾಲ	೨.೦೦
ಐ. ಸಿ. ಡಿ. ಪಿ.	೧.೪೪
ನಗದು ಪತ್ತಿನ ಸಾಲ (ಡಿಸಿಸಿ ಬ್ಯಾಂಕ್)	೨೦.೭೮

ನಗದು ಪತ್ತಿನ ಸಾಲ ಬಾಬ್ತು

ಸಂಘವು ಬಿಡಿಸಿಸಿ ಬ್ಯಾಂಕಿನಿಂದ ೨೦ ಲಕ್ಷ ರೂಪಾಯಿಗಳನ್ನು ನಗದು ಪತ್ತಿನ ಸಾಲವಾಗಿ ತೆಗೆದುಕೊಂಡಿದ್ದು ಈ ಪೂರ್ತಿ ಹಣವನ್ನು ತನ್ನ ವ್ಯಾಪಾರದಲ್ಲಿ ತೊಡಗಿಸಿದೆ.

ನಗದು ಪತ್ತಿನ ಸಾಲ ಬಾಬ್ತು ಬಿಡಿಸಿಸಿ ಬ್ಯಾಂಕಿಗೆ ರೂ. ೨೦.೦೦ ಲಕ್ಷಗಳ ಸಾಲ ಹಾಗೂ ರೂ. ೭೮೦೦-೦೦ ಬಡ್ಡಿ ಹಣವನ್ನು ಸಂಘವು ಪಾವತಿ ಮಾಡಬೇಕಾಗಿರುತ್ತದೆ. ಪಶ್ಚ ಪುಸ್ತಕದ ಬಾಬ್ತು ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬಗ್ಗೆ ಬಾಬ್ತು ರೂ. ೩.೫೦ ಲಕ್ಷಗಳಷ್ಟು ಹಣವನ್ನು ಪಾವತಿ ಮಾಡಬೇಕಾಗಿರುತ್ತದೆ. ಸಾರ್ವಜನಿಕರಿಂದ ಕರೆ ಠೇವಣಿಯನ್ನು ಪಡೆದುಕೊಂಡಿದ್ದು, ಈ ಬಾಬ್ತು ರೂ. ೨.೦೦ ಲಕ್ಷಗಳಷ್ಟು ಹಣವನ್ನು ಪಾವತಿ ಮಾಡಬೇಕಾಗಿರುತ್ತದೆ.

೧೯೯೧-೯೨ರ ಅವಧಿಯಲ್ಲಿ ಬಾಯಿಲರ್ ಟ್ಯಾಂಕ್‌ಗಳನ್ನು ಖರೀದಿ ಮಾಡಲು ಟೆಂಡರುಗಳನ್ನು ಕರೆದಿರುವುದಿಲ್ಲ. ನಂತರ ೧೯೮೯-೯೦ನೇ ಸಾಲಿನಲ್ಲಿ ರಬ್ಬರ್ ಷೆಲ್ಲರ್ ಮತ್ತು ಯಂತ್ರೋಪಕರಣಗಳನ್ನು ರೂ. ೨೮,೫೦೦-೦೦ ಕ್ಕೆ ಖರೀದಿ ಮಾಡಿದ್ದು ನಿಯಮಗಳ ಪ್ರಕಾರ ಕೊಟೇಷನ್ ಕರೆದು ಈ ಉಪಕರಣಗಳನ್ನು ಖರೀದಿಸಿರುತ್ತಾರೆ. ಸಂಘದ ವ್ಯವಹಾರದಲ್ಲಿ ಆಂದಿನ ಆಡಳಿತಾಧಿಕಾರಿಗಳಿಂದ ರೂ. ೧೯,೧೭೭-೩೨ ರಷ್ಟು ಹಣ ದುರುಪಯೋಗವಾಗಿದ್ದು ವಸೂಲಾತಿಗಾಗಿ ಪ್ರಕರಣವು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೨ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆ ನಿಷೇಧ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ